

2022 ಹೇಗಿರಬೇಕು?

## ಆತ್ಮಾವಲೋಕನಕ್ಕಿದು ಕಾಲ



ನಾವೀಗ 21ನೇ ಶತಮಾನದ ಎರಡನೇ ದಶಕದ ಮೊದಲ ವರ್ಷ ಮುಗಿಸಿದ್ದೇವೆ. ಸಂಖ್ಯೆಯ ದೃಷ್ಟಿಯಿಂದ ವಿಶೇಷ ಮಹತ್ವವೇನಿಲ್ಲ. ಆದರೆ ಈ ಅವಧಿಯು ಮನುಷ್ಯಕುಲಕ್ಕೆ ಕಲಿಸಿರುವ ಪಾಠಗಳ ದೃಷ್ಟಿಯಿಂದ ಹಲವು ಮಹತ್ವದ ಸಂಗತಿಗಳಿವೆ. ಕೋವಿಡ್, ಸರ್ವಾಧಿಕಾರಿ ಪ್ರಭುತ್ವಗಳು, ಸಂಕುಚಿತ ಚಿಂತನೆಗಳು, ಭಿನ್ನ ಬಗೆಯ ಜನ ಹೋರಾಟಗಳು, ಪರಿಸರದಲ್ಲಿನ ಏರುಪೇರು, ಶಿಕ್ಷಣದ – ಆರೋಗ್ಯದ ಸವಾಲುಗಳು ಹೀಗೆ ಹತ್ತು ಹಲವು.

ಕಣ್ಣೆದುರಿಗೇ ಸಂಬಂಧಿಗಳು ಅಥವಾ ಸ್ನೇಹಿತರಲ್ಲಿ ಒಬ್ಬರಾದರೂ ಇದ್ದಕ್ಕಿದ್ದಂತೆ ತೀರಿಹೋದ ವಿದ್ಯಮಾನವು ಕೋವಿಡ್ ಎರಡನೇ ಅಲೆಯ ಸಂದರ್ಭದಲ್ಲಿ ಪ್ರತೀ ಕುಟುಂಬಕ್ಕೂ ಬಂದ ಅನುಭವ. ಆದರೆ ಇದು ಮನುಷ್ಯರಲ್ಲಿ ವಿಶಾಲ ಮನೋಭಾವ, ಇನ್ನೊಬ್ಬರ ಕಷ್ಟಕ್ಕೆ ಒದಗುವ (ಕೋವಿಡ್ ಬಿಕ್ಕಟ್ಟಿನ ಸಂದರ್ಭದಲ್ಲಿ ಸಾಧ್ಯವಾಗಿದ್ದ ಸಮಷ್ಟಿ ಗುಣವದು) ಮಾನವೀಯತೆಗಳನ್ನು ಸ್ಥಾಯಿಯಾಗಿಸಲಿಲ್ಲವಲ್ಲ?

2022ರ ವರ್ಷವು ಈ ಜಗತ್ತಿನಲ್ಲಿ, ನಮ್ಮ ದೇಶದಲ್ಲಿ, ನಮ್ಮ ರಾಜ್ಯದಲ್ಲಿ ಆ ಕುರಿತ ಆತ್ಮಾವಲೋಕನವನ್ನು ತರಲು, ಹೊಸ ರಾಜಕಾರಣ, ಹೊಸ ಸಮಾಜ, ಆರೋಗ್ಯ–ಶಿಕ್ಷಣ–ಉದ್ಯೋಗಗಳ ದೃಷ್ಟಿಯಿಂದ ಹೊಸ ಚಿಂತನೆ ಹುಟ್ಟಲು ಕಾರಣವಾಗಲಿ.

**-ಎಚ್.ವಿ. ವಾಸು**
ವೈದ್ಯ–ಸಾಮಾಜಿಕ ಕಾರ್ಯಕರ್ತ, ಬೆಂಗಳೂರು

ಸಮಸ್ಯೆಯೇ ಇಲ್ಲ ಎಂಬಂತೆ ನಟಿಸುತ್ತಿದ್ದೇವೆ.

ಪ್ರಿಯ ಹೊಸ ವರುಷವೇ, ನಿನ್ನ ಹೆಸರಿನಲ್ಲಿ ಮೂರು ಬಾರಿ ಎರಡು ಎಂಬ ಸಂಖ್ಯೆಯಿದೆ. ಈ ಎರಡು ಎಂಬ ಸಂಖ್ಯೆ ನಮಗೆ ಏನನ್ನು ತಿಳಿಸಲು ಹೊರಟಿರಬಹುದು? ಎರಡು ಮನಸ್ಥಿತಿಗಳನ್ನು, ಎರಡು ನಂಬಿಕೆಗಳನ್ನು, ಎರಡು ವರ್ಗಗಳನ್ನು ಈ ಸಂಖ್ಯೆ ಪ್ರತಿನಿಧಿಸುತ್ತಿರಬಹುದೇ? ಅವೆರಡನ್ನೂ ಪಕ್ಕಪಕ್ಕದಲ್ಲಿಟ್ಟು ನೋಡಿದಂತೆಯೇ ಭಿನ್ನತೆಯಲ್ಲಿಯೂ ಏಕತೆಯನ್ನು ಕಾಣಲು ಪ್ರಯತ್ನಿಸುವಂತೆ ನೀನು ಒತ್ತಾಯಿಸುತ್ತಿರಬಹುದೇ? ಒಂದು ವರ್ಷದಲ್ಲಿ ಶತಮಾನಗಳ ವಿಷ–ಹಗೆತನ ಮಾಯವಾಗುವುದಿಲ್ಲ ಅಂತ ಗೊತ್ತಿದೆ. ಕೊನೆಗೆ ಎಲ್ಲಿಯಾದರೂ ತಪ್ಪಿದರೆ ಮತ್ತೆ ಸೊನ್ನೆಯಿಂದ ಶುರು ಮಾಡಬಹುದು ಎಂಬ ಧೈರ್ಯ ಕೊಡಲು ನಿನ್ನ ಹೆಸರಿನಲ್ಲಿ ಒಂದು ಸೊನ್ನೆಯೂ ಇದೆಯಲ್ಲ...

ಪ್ರತೀ ಹೊಸ ವರುಷವೂ ಹಿಂದಿನದರ ಪುನರುಕ್ತಿ ಎಂಬ ಒಂದು ಮಾತಿದೆ. ಆದರೂ ನೀನು ಬರಬೇಕು. ನಿನ್ನ ಬರುವೆಂದರೆ ಕಾಲ ಸರಿಯುವ, ನೋವು ಮಾಯಿಸುವ ಸಂಕೇತ. ಕಳೆದೆರಡು ವರ್ಷಗಳಲ್ಲಿ ಎಷ್ಟೆಲ್ಲ ಸಾವು ನೋವುಗಳಾಗಿ ಹೋದವು. ಒಂದು ಹಂತದಲ್ಲಿ ಜಗತ್ತೇ ಒಂದು ಸಾವಿನ ಮನೆಯಂತಾಗಿ ಹೋಯಿತು. ಎಲ್ಲ ವಲಯಗಳಲ್ಲೂ, ಪರಿಚಯದ ಒಬ್ಬರಾದರೂ ಈ ಮಹಾಮಾರಿಗೆ ಬಲಿಯಾದರು.

ಹೊತ್ತಲ್ಲದ ಹೊತ್ತಲ್ಲಿ ನೆರೆಮನೆಯಲ್ಲಿ ಎದ್ದ ಸಂಕಟದ ಕೂಗನ್ನು, ನಡುಮಧ್ಯಾಹ್ನದ ಊಟದ ಹೊತ್ತಲ್ಲಿ ಎದೆನಡುಗಿಸುವಂತೆ ಕೇಳಿಸಿದ ಆಂಬುಲೆನ್ಸ್‌ನ ಆರ್ತನಾದವನ್ನು, ಮುಸ್ಸಂಜೆ ಹೊತ್ತಲ್ಲಿ ಕಾಲಿಂಗ್ ಬೆಲ್ ಸದ್ದು ಕೇಳಿದರೆ ಪಕ್ಕನೆ ಕಣ್ಣೆದುರು ನಿಲ್ಲುವ, ಕೈಯಲ್ಲಿ ಕುಣಿಕೆ ಹಿಡಿದ ಯಮದೂತರ ಸಿನಿಮೀಯ ಚಿತ್ರವನ್ನು ಕಾಣುತ್ತಲೇ ಕಳೆದುಹೋದ ಕಳೆದ ವರ್ಷದ ಸೂತಕದ ಛಾಯೆಯಿನ್ನೂ ದೀಪದ ಸೊಡರಿನಂತೆ ಎದೆಯಲ್ಲಿ ಸುಳಿದಾಡುತ್ತಲಿದೆ. ಸುರಕ್ಷಿತವಾಗಿದ್ದೇವೆ ಎಂಬ ಭಾವವೇ ಪಾಪಪ್ರಜ್ಞೆಯನ್ನೂ ಹುಟ್ಟುಹಾಕಿಸುವ ಸಾಲು ಸಾಲು ಸಾವಿನ ಸುದ್ದಿಗಳನ್ನು, ಆಸ್ಪತ್ರೆ ಎದುರು, ನ್ಯಾಯಬೆಲೆ ಅಂಗಡಿಗಳ ಎದುರು, ಪ್ರಾಥಮಿಕ ಆರೋಗ್ಯ ಕೇಂದ್ರಗಳೆದುರು, ಊರ ದಾರಿ ಶುರುವಾಗುವ ನಿಲ್ದಾಣದೆದುರು, ಕೊನೆಗೆ ಮಸಣದಲ್ಲಿಯೂ ಕಣ್ಣೀರು ಬತ್ತಿದ ಸರತಿ ಸಾಲುಗಳನ್ನು – ತಮಗೂ ಅದಕ್ಕೂ ಸಂಬಂಧವೇ ಇಲ್ಲವೆನ್ನುವ ಹಾಗೆ ಉಣ್ಣುತ್ತ, ಮೀಯುತ್ತ, ಮಕ್ಕಳಿಗೆ ಆನ್‌ಲೈನ್ ಕ್ಲಾಸ್‌ಗೆ ತಯಾರಿ ನಡೆಸುತ್ತ, ತರಕಾರಿಗಳನ್ನು ಉಪ್ಪುನೀರಿನಲ್ಲಿ ನೆನೆಸುತ್ತ, ಬಗೆಬಗೆಯ ಕಷಾಯಗಳನ್ನು ಕುಡಿಯುತ್ತ ನೋಡುತ್ತ ನೋಡುತ್ತಲೇ ಕಳೆದುಬಿಟ್ಟೆವಲ್ಲ...